# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **2196**

ಸದಸ್ಯರ ಹೆಸರು : **ಶ್ರೀ ಸುನೀಲ್ ಗೌಡ ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಉತ್ತರಿಸಬೇಕಾದ ಸಚಿವರು : ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸಬೇಕಾದ ದಿನಾಂಕ : 18-03-2022

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ವಿಜಯಪುರ, ಬಾಗಲಕೋಟೆ ಮತ್ತು ಜಮಖಂಡಿ ಪ್ರಾದೇಶಿಕ ಸಾರಿಗೆ ಕಛೇರಿ (RTO) ವ್ಯಾಪ್ತಿಯಲ್ಲಿ ವಾಹನಗಳ ನೋಂದಣಿ (ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನ) ಮಾಡಿಸುವಲ್ಲಿ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;</td><td>ಸದರಿ ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>ವಿಜಯಪುರ, ಬಾಗಲಕೋಟೆ ಮತ್ತು ಜಮಖಂಡಿ ಪ್ರಾದೇಶಿಕ ಸಾರಿಗೆ ಕಛೇರಿ (RTO) ವ್ಯಾಪ್ತಿಯಲ್ಲಿ ವಾಹನಗಳ ನೋಂದಣಿ (ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನ) ಮಾಡಿಸುವಲ್ಲಿ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವುದಿಲ್ಲ.</td></tr>
<tr><td>ಆ.</td><td>ಕಳೆದ 6 ತಿಂಗಳಲ್ಲಿ ಈ ಪ್ರಾದೇಶಿಕ ಸಾರಿಗೆ ಕಛೇರಿ ವ್ಯಾಪ್ತಿಯಲ್ಲಿ ವ್ಯಾಪ್ತಿಯಲ್ಲಿ ಎಷ್ಟು ವಾಹನಗಳ ನೋಂದಣಿ ಮಾಡಲಾಗಿದೆ (ವಿವರ ನೀಡುವುದು) ಮತ್ತು ನೋಂದಣಿಯಾದ ಎಷ್ಟು ವಾಹನಗಳಿಗೆ ದಾಖಲಾತಿ (RC ಪುಸ್ತಕ) ಗಳನ್ನು ನೀಡಲಾಗಿದೆ? ಮತ್ತು ಎಷ್ಟು ಬಾಕಿ ಇವೆ (ವಿವರ ನೀಡುವುದು)</td><td>ವಿಜಯಪುರ, ಬಾಗಲಕೋಟೆ ಮತ್ತು ಜಮಖಂಡಿ ಪ್ರಾದೇಶಿಕ/ ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿ ವ್ಯಾಪ್ತಿಯಲ್ಲಿ ಕಳೆದ ಆರು ತಿಂಗಳಲ್ಲಿ ನೋಂದಣಿ ಮಾಡಲಾದ, ನೋಂದಣಿ ಪ್ರಮಾಣ ಪತ್ರ ನೀಡಲಾದ ಮತ್ತು ನೋಂದಣಿ ಪ್ರಮಾಣ ಪತ್ರ ವಿತರಿಸಲು ಬಾಕಿ ಇರುವ ವಿವರ ಈ ಕೆಳಕಂಡಂತಿದೆ.<br><br>
<table>
<tr><th>RTO/ARTO ಕಛೇರಿ</th><th>ನೋಂದಣಿಯಾದ ವಾಹನಗಳ ಸಂಖ್ಯೆ</th><th>ಆರ್.ಸಿ ಕಾರ್ಡ್ ವಿತರಿಸಿದ ವಾಹನಗಳ ಸಂಖ್ಯೆ</th><th>ಬಾಕಿ ಇರುವ ವಾಹನಗಳ ಸಂಖ್ಯೆ</th></tr>
<tr><td>ವಿಜಯಪುರ</td><td>18,066</td><td>16374</td><td>1692</td></tr>
<tr><td>ಬಾಗಲಕೋಟೆ</td><td>8032</td><td>6936</td><td>1096</td></tr>
<tr><td>ಜಮಖಂಡಿ</td><td>5991</td><td>4420</td><td>1571</td></tr>
</table></td></tr>
<tr><td>ಇ.</td><td>ಯಾವ ಯಾವ ವಾಹನಗಳಿಗೆ ಎಷ್ಟು ನೋಂದಣಿ ಶುಲ್ಕ ನಿಗದಿಪಡಿಸಲಾಗಿದೆ (ವಾಹನವಾರು ಮಾಹಿತಿ ನೀಡುವುದು)</td><td>ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989 ರ ನಿಯಮ 81 ರಲ್ಲಿನ ಕೋಷ್ಟಕದ ಕ್ರ.ಸಂ. 4 ರಲ್ಲಿ ವಿವಿಧ ವರ್ಗದ ವಾಹನಗಳಿಗೆ ನೋಂದಣಿ ಶುಲ್ಕಗಳನ್ನು ನಿಗದಿಪಡಿಸಲಾಗಿದ್ದು, ಸದರಿ ನಿಯಮದ ಉದ್ಧೃತ ಭಾಗದ ಪ್ರತಿಯನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.<br><br>ಸದರಿ ನೋಂದಣಿ ಶುಲ್ಕಗಳನ್ನು ಕರ್ನಾಟಕ ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಸಾರಿಇ 110 ಸಾಇಪ 2017 (ಭಾಗ-1), ದಿನಾಂಕ:20-07-2018 ರಲ್ಲಿ ಭಾಗಶಃ ಮಾರ್ಪಡಿಸಿದ್ದು, ಭಾರಿ ಸರಕು ಸಾಗಣೆ ವಾಹನ ಮತ್ತು ಪ್ರಯಾಣಿಕ ವಾಹನಗಳಿಗೆ ರೂ.1000/- ಗಳನ್ನು ನಿಗದಿಪಡಿಸಲಾಗಿರುತ್ತದೆ</td></tr>
</table>

| | | |
|---|---|---|
| | | ಆದೇಶದ ಪ್ರತಿಯನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.<br>ನೋಂದಣಿ ಶುಲ್ಕದೊಂದಿಗೆ ದ್ವಿಚಕ್ರ ವಾಹನ / ತ್ರಿಚಕ್ರ ವಾಹನ (ಸರಕು/ಪ್ರಯಾಣಿಕರ ವಾಹನ) ಗಳಿಗೆ ರೂ.500/- ಹಾಗೂ ಇತರೆ ಎಲ್ಲಾ ವರ್ಗದ ಸಾರಿಗೆ ಮತ್ತು ಸಾರಿಗೇತರ ವಾಹನಗಳಿಗೆ ರೂ.1000/- ರಂತೆ ರಸ್ತೆ ಸುರಕ್ಷತಾ ಉಪಕರಗಳನ್ನು ನಿಗದಿಪಡಿಸಿದೆ. ಆದೇಶದ ಪ್ರತಿಯನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ. |
| ಈ. | ವಾಹನಗಳ ನೋಂದಣಿಗೆ ಸರ್ಕಾರ ವಿಧಿಸಿರುವ ಶುಲ್ಕವಲ್ಲದ ಇನ್ನ್ಯಾವುದಾದರೂ ಶುಲ್ಕವನ್ನು ಪಡೆಯಲಾಗುತ್ತಿದೆಯೇ? ಪಡೆಯುತ್ತಿದ್ದಲ್ಲಿ ಯಾವ ಶುಲ್ಕ ಮತ್ತು ಪಡೆದ ಶುಲ್ಕಕ್ಕೆ ರಶೀದಿ (Receipt) ನೀಡಲಾಗುತ್ತದೆಯೇ? | ಮೇಲ್ಕಂಡ ಕ್ರಮ ಸಂಖ್ಯೆ (ಇ) ರಲ್ಲಿ ವಿವರಿಸಿದ ಶುಲ್ಕಗಳ ಹೊರತಾಗಿ ಬೇರೆ ಯಾವುದೇ ಶುಲ್ಕಗಳನ್ನು ಪಡೆಯಲು ಅವಕಾಶವಿರುವುದಿಲ್ಲ. |
| ಉ | ನೋಂದಣಿಯಾದ ವಾಹನಗಳಿಗೆ ಯಾವ ಕಾಲಮಿತಿಯಲ್ಲಿ ವಾಹನ ದಾಖಲಾತಿಗಳನ್ನು ನೀಡಲಾಗುತ್ತದೆ; ಕಾಲಮಿತಿ ಮೀರಿದಲ್ಲಿ ಯಾವ ಕ್ರಮ ಕೈಗೊಳ್ಳಲಾಗುವುದು? (ವಿವರ ಒದಗಿಸುವುದು) | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಅಧಿಸೂಚನೆ ಸಂಖ್ಯೆ: ಸಿಆಸುಇ 296 ನಾಸೇಕ 2018, ದಿನಾಂಕ:13-08-2019 ರನ್ವಯ ಹೊಸ ವಾಹನ ನೋಂದಣಿ ಅರ್ಜಿಗಳ ವಿಲೇವಾರಿಗೆ 21 ಕಛೇರಿ ದಿನಗಳ "ಸಕಾಲ" ಕಾಲಮಿತಿಯನ್ನು ನಿಗದಿಪಡಿಸಲಾಗಿದೆ. ನೋಂದಣಿಯಾದ ವಾಹನಗಳಿಗೆ "ಸಕಾಲ" ಕಾಲಮಿತಿಯೊಳಗೆ ಅನುಮೋದನೆಯನ್ನು ನೀಡಲಾಗುವುದು.<br>ಮುಂದುವರೆದು, DL ಮತ್ತು RC ಕಾರ್ಡ್ ಗಳನ್ನು ಮುದ್ರಿಸಲು ಪ್ರಸ್ತುವಿರುವ ವ್ಯವಸ್ಥೆಯನ್ನು ಮಾರ್ಪಾಡು ಮಾಡಿ ಕೇಂದ್ರೀಕೃತ ವ್ಯವಸ್ಥೆಯಡಿಯಲ್ಲಿ ಮುದ್ರಿಸಿ ರವಾನಿಸಲು ನೆಲಮಂಗಲ RTO ಕಛೇರಿಯಲ್ಲಿ ಸ್ಥಳ ಗುರುತಿಸಲಾಗಿದ್ದು, ಕೂಡಲೇ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಕಾರ್ಡ್‌ಗಳನ್ನು Speed Post ಮುಖಾಂತರ ನೇರವಾಗಿ ಅರ್ಜಿದಾರರಿಗೆ ಸಂಪರ್ಕರಹಿತ ಮಾದರಿಯಲ್ಲಿ ರವಾನಿಸಲು Postal ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಳ್ಳುವ ಪ್ರಕ್ರಿಯೆ ಪರಿಶೀಲನೆಯಲ್ಲಿರುತ್ತದೆ ಹಾಗೂ ಖಾಸಗಿ ಸರಬರಾಜುದಾರರೊಂದಿಗೆ ಈ ಹಿಂದೆ ಮಾಡಿಕೊಂಡಿರುವ ಒಪ್ಪಂದವನ್ನು ಮೇಲಿನಂತೆ ಕೇಂದ್ರೀಕೃತ ವ್ಯವಸ್ಥೆಯಲ್ಲಿ ಮುದ್ರಿಸುವ ಸೂಕ್ತ ಮಾರ್ಪಾಡು ಮಾಡಲು ಕ್ರಮ ಕೈಗೊಳ್ಳಲಾಗುವುದು.<br>ಮೇಲಿನಂತೆ ಕ್ರಮ ಕೈಗೊಳ್ಳಲಾಗುವುದರಿಂದ ಅರ್ಜಿದಾರರು ಸಂಪರ್ಕರಹಿತವಾಗಿ ಆನ್‌ಲೈನ್ ಮುಖಾಂತರ ನೇರವಾಗಿ RTO ಕಛೇರಿಗೆ ಭೇಟಿ ನೀಡದೇ ಸೇವೆಯನ್ನು ಪಡೆಯಬಹುದಾಗಿದೆ. |

ಟಿಡಿ 47 ಟಿಡಿಕ್ಯೂ 2022

**(ಬಿ. ಶ್ರೀರಾಮುಲು)**

**ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು.**

ಅನುಬಂಧ-1



**77. Exhibition of registration mark.**—(1) The registration mark assigned under sub-rules (5) to (7) of Rule 76 shall be clearly exhibited in reflecting colour both at the front and rear of the vehicle on the plain surface of a plate or part of the vehicle and the size of which shall be 41 centimetres by 14 centimetres,—

(i) with deep blue background, the registration mark and the number being in white in the case of motor vehicles referred to in sub-rule (6) of Rule 76;

(ii) [1][with deep blue background, the registration mark and the number being in yellow], in the case of motor vehicles referred to in sub-rule (7) of Rule 76.

[2][(iii) with light green background, the registration mark and the number being in white in case of motor vehicles referred to in Rule 76- B.]

(2) The registration mark shall be in English letters and Arabic numerals and,—

(i) save in the case of a motor-cycle or an invalid carriage, the letters shall be not less than 6 centimetres high and 2 centimetres thick at any part, the numerals shall be not less than 9 centimetres high and 2 centimetres thick at any part, and there shall be a space between any letter or any numeral and the edge of the plain surface of not less than 1 centimetre and a space between any two letters and between any two numerals of not less than 1 centimetre; and

(ii) in the case of a motor-cycle or an invalid carriage, the dimensions of the letters and figures shall not be less than two-thirds of those specified in clause (i).

(3) The plain surface referred to in sub-rule (2) shall not be inclined from the vertical by more than thirty degrees. The letters and numerals shall be exhibited as follows,—

(i) in the case of a transport vehicle, the registration mark shall be exhibited in two separate horizontal lines, the number allotted to the Mission or Post and the letters forming the first line followed by the number allotted by the registering authority in the second line; and

(ii) in all other cases, the registration mark may exhibit the letters and numerals either in two horizontal lines as aforesaid or in one horizontal line.

(4) Notwithstanding anything contained in sub-rule (1), the registration mark exhibited at the front of a motor-cycle or an invalid carriage may be displayed on a plate in line which the axis of the vehicle and shall, in such a case, be displayed on both sides of the plate.

(5) In the case of a trailer,—

(i) the registration mark shall be exhibited on a plate or surface on the left hand side of the trailer, the dimensions of the letters and figures being not less than two-thirds of the dimensions specified in sub-rule (2);

(ii) the registration mark of the drawing motor vehicle to be affixed to the rear of the trailer shall be in conformity with the provisions of these rules relating to the registration mark affixed to the rear of the motor vehicle.

---

1. Substituted for the words "with yellow background, the registration mark and the number being in black" by GSR 633(E), dated 23-6-2017, w.e.f. 23-7-2017

2. Clause (iii) inserted by GSR 395(E), dated 16-7-1997, w.e.f. 16-7-1997

(6) The registration mark shall also be painted on the right and left side of the body of a transport vehicle.

**78. Assignment of new registration mark on removal of vehicle to another State.**—(1) Every application for assignment of new registration mark on removal to another State under sub-section (1) of Section 47 by or on behalf of a diplomatic officer or consular officer shall be made in triplicate in Form 44 and shall be addressed to the registering authority through the competent authority accompanied by the relevant documents and fees referred to in Rule 54.

(2) The provisions of sub-rules (2) to (7) of Rule 76 shall apply to an application made under sub-rule (1) as they apply to an application made under sub-rule (1) of Rule 76.

**79. Suspension and cancellation of registration of vehicle registered under Rule 76.**—If, under the provisions of Section 53, Section 54 or Section 55, the registration of a motor vehicle made in accordance with Rule 76 is suspended or cancelled, then a copy of the order of suspension or cancellation shall be sent to the competent authority in addition to each of the authorities or persons to whom a copy has to be sent under the said sections.

**80. Transfer or disposal of motor vehicle registered under Rule 76.**—(1) Where a motor vehicle registered in accordance with Rule 76 is transferred by way of sale or otherwise, the transferor shall, within fourteen days, report the fact of the transfer along with the full name and address of the person to whom the vehicle is transferred to the registering authority within whose jurisdiction transfer is effected and shall simultaneously send copies of the said report to,—

(a) the transferee;

(b) the competent authority;

(c) the collector of customs of the port of importation of the vehicle and where it is not possible to locate the port of importation, to the Collector of Central Excise and Customs nearest to the headquarters of the transferee; and

(d) the original registering authority in whose records the registration of the vehicle is recorded, if the transfer is effected in the jurisdiction of another registering authority;

and shall also surrender the number plate in respect of the vehicle to the registering authority in whose records the registration of the vehicle is recorded, when the transfer is to a person other than a diplomatic officer or a consular officer.

(2) Where the transferee is a diplomatic officer or a consular officer, an application by or on his behalf shall be made to the registering authority for registration of the vehicle in accordance with the provision of Rule 76.

*Fees*

[1][**81. Fees.**—The fees which shall be charged under the provisions of this Chapter shall be as specified in the Table below:

Provided that the States may levy [2][fee lower than the amount specified in the table and may also levy] additional amounts to cover the cost of automation and technology utilised for conducting the testing or providing value added services.

1. Rule 81 substituted by GSR 1183(E), dated 29-12-2016, w.e.f. 29-12-2016

2. Inserted by GSR 271(E), dated 21-3-2017, w.e.f. 21-3-2017

## TABLE

| | Purpose | Amount | Rule | Section |
|---|---|---|---|---|
| | (2) | (3) | (4) | (5) |
| 1. | Grant or renewal of trade certificate in respect of each class of vehicle: | | 34(1) | |
| | (a) Motorcycle | Five hundred rupees | | |
| | (b) Invalid Carriage | Five hundred rupees | | |
| | (c) Others | One thousand rupees | | |
| 2. | Duplicate trade certificate: | | 38(1) | |
| | (a) Motorcycle | Three hundred rupees | | |
| | (b) Invalid Carriage | Three hundred rupees | | |
| | (c) Others | Five hundred rupees | | |
| 3. | Appeal under Rule 46 | One thousand rupees | 46(1) | |
| 4. | Issue or renewal of certificate of registration and assignment of new registration mark: | | 47(1) 52(1) 54(1) 76(1) and 78(1) | |
| | (a) Invalid Carriage | | | |
| | (b) Motorcycle | Fifty rupees | | |
| | (c) Three wheeler/Quadri cycle/ Light Motor Vehicles: | Three hundred rupees | | |
| | (i) Non-transport | Six hundred rupees | | |
| | (ii) Transport | One thousand rupees | | |
| | (d) Medium goods vehicle | One thousand rupees | | |
| | (e) Medium passenger motor vehicle | One thousand rupees | | |
| | (f) Heavy goods vehicle | One thousand and five hundred rupees | | |
| | (g) Heavy passenger motor vehicle | One thousand and five hundred rupees | | |
| | (h) Imported motor vehicle | Five thousand rupees | | |
| | (i) Imported motor cycle | Two thousand and five hundred rupees | | |
| | (j) Any other vehicle not mentioned above | Three thousand rupees | | |
| | Note 1.—Additional fee of two hundred rupees shall be levied if the certificate of registration is a smart card type issued or renewed in Form 23-A. | | | |

| | | | | |
|---|---|---|---|---|
| | Note 2.—In case of delay in applying for renewal of certificate of registration, an additional fee of three hundred rupees for delay of every month or part thereof in respect of motor cycles and five hundred rupees for delay of every month or part thereof in respect of other classes of non-transport vehicles shall be levied. | | | |
| [illegible] | Issue or extension of temporary certificate of registration | Half of the fee mentioned against Serial No. 4 | 53-A] | |
| [illegible] | Issue of duplicate certificate of registration | Half of the fee mentioned against Serial No. 4 | 53(2) | |
| [illegible] | Transfer of ownership | Half of the fee mentioned against Serial No. 4.<br>Note.—In case of delay in submission of 'No Objection Certificate', an additional fee of rupees three hundred for delay of each month or part thereof in case of motor cycles and five hundred rupees for each month of delay or part thereof for other vehicles shall be levied. | 55(2)(iii), 55(3), 56(2)(a) and 57(1)(a) | |
| [illegible] | Change of residence | Half of the fee mentioned against Serial No. 4.<br>Note.—In case of delay in submitting 'No Objection Certificate' for change of residence, an additional fee of rupees three hundred for delay of each month or part thereof in case of motor cycles and five hundred rupees for each month of delay or part thereof for other vehicles shall be levied. | 59 | |
| [illegible] | Recording alteration in the certificate of registration [2][, except for alteration made under sub- section (1-A) and sub-section (2) of Section 52 of the Act] | Half of the fee mentioned against Serial No. 4 | | |
| [illegible] | Endorsing hire purchase/lease/ hypothecation agreement.— | | 60 | |
| | (a) Motorcycle | Five hundred rupees | | |
| | (b) Three wheeler/quadri cycle/light motor vehicle | One thousand and five hundred rupees | | |
| | (c) Medium or heavy vehicle | Three thousand rupees | | |

1. Sl. No. 4-A inserted by GSR 240(E), dated 31-3-2021, w.e.f. 1-4-2021
2. Inserted by GSR 240(E), dated 31-3-2021, w.e.f. 1-4-2021

| | | | | |
|---|---|---|---|---|
| | Note.—No separate fee will be levied for cancellation of lease, etc., or for issue of fresh Certificate of Registration thereafter. | | | |
| 10. | Conducting test of a vehicle for grant or renewal of certificate of fitness: | | 62(2) | |
| | (a) Motorcycle | (i) Manual: Two hundred rupees<br>(ii) Automated: Four hundred rupees | | |
| | (b) Three wheeled or light motor vehicle or quadri cycle | (i) Manual : Four hundred rupees<br>(ii) Automated: Six hundred rupees | | |
| | (c) Medium or heavy motor vehicle | (i) Manual: Six hundred rupees<br>(ii) Automated: One thousand rupees | | |
| 11. | Grant or renewal of certificate of fitness for motor vehicle | Two hundred rupees.<br>Note.—Additional fee of fifty rupees for each day of delay after expiry of certificate of fitness shall be levied. | 62(2) | |
| 12. | Grant or renewal of letter of authority | Fifteen thousand rupees | 63(2)(a) | |
| 13. | Issue of duplicate letter of authority | Seven thousand and five hundred rupees | 66(2) | |
| 14. | Appeal under Rule 70 | Three thousand rupees | 71(1) | |
| 15. | Any application not covered under entries at Serial Nos. 1 to 14 above | Two hundred rupees | | 64(p) |

| | | | |
|---|---|---|---|
| [1][16. | Registration and issue of certificate of registration for Vintage Motor Vehicles | Twenty Thousand | 81-C |
| 17. | Re-registration/Renewal of certificate of registration for Vintage Motor Vehicles | Five Thousand | 81-C] |

**Note 1.**—For the removal of doubts, it is hereby clarified that medium passenger motor vehicles, heavy goods vehicles, imported motor vehicles or any other vehicles not mentioned against Serial No. 4 of the above Table include both transport and non-transport vehicles.

[2][**Note 2.**—Where the certificate of registration issued is in the form of laminated card without chip or Smart Card type driving licence, an additional fee of two hundred rupees shall be charged except in the case of issue of fresh certificate of registration after cancellation of hire purchase or lease or hypothecation agreement.]

1. Sl. Nos. 16 and 17 inserted by GSR 492(E), dated 15-7-2021, w.e.f. 16-7-2021
2. Note 2 substituted by GSR 174(E), dated 1-3-2019, w.e.f. 1-10-2019

## [1][CHAPTER III-A

## SPECIAL PROVISION FOR REGISTRATION OF VINTAGE MOTOR VEHICLES

**81-A. Procedure of application and issuance of Certificate of Registration as a Vintage Motor Vehicle.**—(1) An application for registration or re-registration of a vintage vehicle shall be made as per Form 20 and every application for registration shall be accompanied by.—

(i) a policy of insurance;

(ii) appropriate fee as specified in Rule 81;

(iii) Bill of Entry in the case of imported vintage motor vehicles; and

(iv) old Registration Certificate in case of already registered vehicle in India.

*Explanation.*—For the purpose of this rule, "Vintage Motor Vehicle" means any vehicle classified under vintage vehicle category as defined in this order for L1 and L2 categories (two-wheeler) and M1 category (four-wheeler), which is more than fifty years old from the date of first registration after first sale including any vehicle imported into India subject to the condition that such vehicle should be maintained in its original form and should not have undergone any substantial overhaul, which includes any modification in chassis or body shell or engine.

(2) The State Registering Authority shall issue to the owner of a Vintage Motor Vehicle registered by it, a certificate of registration, as per Form 23-A within a period of sixty days from the receipt of such an application and shall also enter in the National register, the particulars of such certificate and changes thereof:

Provided that the old certificate of registration of a motor vehicle after being registered as Vintage Motor Vehicle, if any, shall be cancelled and the owner may retain such cancelled certificate of registration for historical purposes only.

(3) The Registering Authority shall maintain a complete record of previous registration and ownership record and all such records shall be updated on the portal.

(4) If, at any time after the registration of a Vintage Motor Vehicle, an application shall be made to the registering authority regarding.—

(i) issuance of a duplicate certificate of registration;

(ii) transfer of ownership of the motor vehicle; or

(iii) change of address,

such application shall be made in the manner provided under the Motor Vehicles Act, 1988 and be accompanied by such fees as prescribed under the Central Motor Vehicles Rules, 1989.

**81-B. Form and manner of display of registration marks on Vintage Motor Vehicles.**—(1) For fresh registration of such vehicles, under Section 41 of the Act, the Registering Authority shall assign to a Vintage Motor Vehicle for display thereon, a registration mark consisting of the letters "XX VA YY ****", where VA stands for Vintage, XX stands for State code, YY will be a two

---

1. Chapter III-A and Rules 81-A to 81-E inserted by GSR 492(E), dated 15-7-2021, w.e.f. 16-7-2021

ಕರ್ನಾಟಕ ಸರ್ಕಾರ ಅನುಬಂಧ — 2

ಸಾರಿಗೆ ಇಲಾಖೆ

ಸಂ.ಸಾಆ/ನೋಂದಣಿ-1/ಸಿಆರ್-645/2016-17

ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ,
ಟಿಟಿಎಂಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ,
ಬೆಂಗಳೂರು-27 ದಿ:23-07-2018.

ಇವರಿಗೆ

ರಾಜ್ಯದ ಎಲ್ಲಾ ಉಪ ಸಾರಿಗೆ ಆಯುಕ್ತರು ಮತ್ತು
ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಾಗೂ
ಪ್ರಾದೇಶಿಕ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು

ಮಾನ್ಯರೆ,

ವಿಷಯ: ಕೇಂದ್ರ ಮೋಟಾರು ವಾಹನ ನಿಯಮಗಳು 1989ರ ನಿಯಮ 32 ಮತ್ತು 81ರಡಿ ಶುಲ್ಕಗಳ ಕುರಿತು.

ಉಲ್ಲೇಖ: ಕರ್ನಾಟಕ ಸರ್ಕಾರದ ನಡಾವಳಿ ಆದೇಶ ಸಂಖ್ಯೆ:ಸಾಇ 110 ಸಾಇಪ 2017 (ಭಾಗ-1), ದಿನಾಂಕ:20-07-2018.
ಸ್ವೀಕೃತಿ ದಿನಾಂಕ:23-07-2018.

**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ನಡಾವಳಿ ಆದೇಶದಲ್ಲಿ, ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 32 ಮತ್ತು 81ರಡಿ, ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರದ ಮೇರೆಗೆ, ಕೇಂದ್ರ ಸರ್ಕಾರದ ಅಧಿಸೂಚನೆ ಸಂ.ಜಿ.ಎಸ್.ಆರ್.1183(ಇ) ದಿನಾಂಕ:29-12-2016 ರಲ್ಲಿ ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 81ರಲ್ಲಿನ ಕೋಷ್ಟಕದ ಕ್ರ.ಸಂ. 4(ಎಫ್) ಮತ್ತು (ಜೆ) ಹಾಗೂ 9 (ಬಿ) ಮತ್ತು (ಸಿ) ರಲ್ಲಿ ನಿಗದಿಪಡಿಸಿರುವ ಶುಲ್ಕಗಳನ್ನು ರಾಜ್ಯ ಸರ್ಕಾರ ಪರಿಷ್ಕರಿಸಿ ಆದೇಶಿಸಿರುತ್ತದೆ. ಆದ್ದರಿಂದ, ಸದರಿ ನಡಾವಳಿಯ ಪ್ರತಿಯನ್ನು ಮಾಹಿತಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ
ಸಹಿ/-
ಆಯುಕ್ತರು, ಸಾರಿಗೆ ಮತ್ತು
ರಸ್ತೆ ಸುರಕ್ಷತೆ, ಬೆಂಗಳೂರು

ಪ್ರತಿಯನ್ನು

1) ರಾಜ್ಯದ ಎಲ್ಲಾ ಅಪರ ಸಾರಿಗೆ ಆಯುಕ್ತರು, ಜಂಟಿ ಸಾರಿಗೆ ಆಯುಕ್ತರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.
2) ಜಂಟಿ ಸಾರಿಗೆ ಆಯುಕ್ತರು (ಪರಿಸರ & ಇ-ಆಡಳಿತ) ಬೆಂಗಳೂರು ಇವರಿಗೆ ಕಳುಹಿಸುತ್ತಾ, ಸದರಿ ನಡವಳಿ ಆದೇಶ ಮತ್ತು ಈ ಪತ್ರವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಹಾಗೂ ವಾಹನ್ ಮತ್ತು ಸಾರಥಿ ತಂತ್ರಾಂಶಗಳಲ್ಲಿ ಮೇಲ್ಕಂಡಂತೆ ಸರ್ಕಾರವು ಪರಿಷ್ಕರಿಸಿರುವ ದರಗಳನ್ನು ಕೂಡಲೇ ಎಲ್ಲಾ ಅಧೀನ ಕಛೇರಿಗಳಲ್ಲಿ ಅಳವಡಿಸಲು ಕ್ರಮ ವಹಿಸುವಂತೆ ತಿಳಿಸಲಾಗಿದೆ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

ರವಾನಿಸಲಾಗಿದೆ.
ಸಹಿ
ದಿನಾಂಕ

ಆಯುಕ್ತರು, ಸಾರಿಗೆ ಮತ್ತು
ರಸ್ತೆ ಸುರಕ್ಷತೆ, ಬೆಂಗಳೂರು

ಅ೩೦೩೦೬

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:- ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989ರ ನಿಯಮ 32 ಮತ್ತು 81ರಡಿ ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ಶುಲ್ಕ ಮತ್ತು ಹೆಚ್ಚುವರಿ ಶುಲ್ಕಗಳನ್ನು ಪರಿಷ್ಕರಿಸುವ ಕುರಿತು.

**ಓದಲಾಗಿದೆ:-** 1) ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ನವದೆಹಲಿ ಇವರ ಅಧಿಸೂಚನೆ ಸಂಖ್ಯೆ:ಜಿ.ಎಸ್.ಆರ್.1183(ಇ), ದಿನಾಂಕ:29-12-2016.

2) ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ನವದೆಹಲಿ ಇವರ ಅಧಿಸೂಚನೆ ಸಂಖ್ಯೆ:ಜಿ.ಎಸ್.ಆರ್.271(ಇ), ದಿನಾಂಕ:21.03.2017.

3) ಸಾರಿಗೆ ಆಯುಕ್ತರ ಪತ್ರ ಸಂಖ್ಯೆ:ಸಾಆ/ನೋಂದಣಿ-1/ಪಿಆರ್-845/2016-17, ದಿನಾಂಕ:13-04-2017.

* * *

ಕೇಂದ್ರ ಸರ್ಕಾರವು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989ರ ನಿಯಮ 32 ಮತ್ತು 81ರಡಿ ಶುಲ್ಕ ಮತ್ತು ಹೆಚ್ಚುವರಿ ಶುಲ್ಕವನ್ನು ಪರಿಷ್ಕರಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ ಸಾರಿಗೆ ಆಯುಕ್ತರು, ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ಶುಲ್ಕ ಮತ್ತು ಹೆಚ್ಚುವರಿ ಶುಲ್ಕವು ವಾಹನ ಮಾಲೀಕರಿಗೆ ಹೊರೆಯಾಗಿದ್ದು, ಲಾರಿ ಮಾಲೀಕರು ತೀವ್ರವಾದ ತೊಂದರೆ ಅನುಭವಿಸುತ್ತಿರುವುದರಿಂದ ಮೋಟಾರು ವಾಹನಗಳ ಕಾಯ್ದೆ 1988 ಮತ್ತು ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರಡಿ ನಿಗಧಿಪಡಿಸಿರುವ ಶುಲ್ಕ ಮತ್ತು ಹೆಚ್ಚುವರಿ ಶುಲ್ಕವನ್ನು ಪರಿಷ್ಕರಿಸುವಂತೆ ಲಾರಿ ಮಾಲೀಕರ ಸಂಘದವರು ಕೋರಿರುವುದಾಗಿ ತಿಳಿಸಿ, ಅದರಂತೆ ಶುಲ್ಕ ಪರಿಷ್ಕರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಕೇಂದ್ರ ಮೋಟಾರು ವಾಹನ ನಿಯಮಗಳು 1989 ನಿಯಮ 32 ಮತ್ತು 81ಕ್ಕೆ ತಿದ್ದುಪಡಿ ಮಾಡಲಾದ ನಿಯಮಗಳಡಿ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಶುಲ್ಕವನ್ನು ಪರಿಷ್ಕರಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ಪ್ರದತ್ತವಾಗಿರುತ್ತದೆ. ಸದರಿ ಅಧಿಕಾರದಡಿ ಉಲ್ಲೇಖ (1) ರಲ್ಲಿನ ಆದೇಶದಲ್ಲಿ ನಿಗದಿಪಡಿಸಿರುವ ಕೆಲವು ಶುಲ್ಕಗಳನ್ನು ಪರಿಷ್ಕರಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡ ಆದೇಶ;

**ಸರ್ಕಾರದ ಆದೇಶ ಸಂಖ್ಯೆ: ಸಾರಿಇ 110 ಸಾಇಪ 2017 (ಭಾಗ-1),**
**ಬೆಂಗಳೂರು, ದಿನಾಂಕ: 20-07-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 32 ಮತ್ತು 81ರಡಿ, ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರದ ಮೇರೆಗೆ

ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಜಿ.ಎಸ್.ಆರ್.1183 (ಇ), ದಿನಾಂಕ:29-12-2016 ರಲ್ಲಿ ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989 ರ ನಿಯಮ 81 ರಲ್ಲಿನ ಕೋಷ್ಟಕದ ಕ್ರ.ಸಂ. 4 (ಎಫ್) ಮತ್ತು (ಜಿ) ಹಾಗೂ 9 (ಬಿ) ಮತ್ತು (ಸಿ) ರಲ್ಲಿ ನಿಗಧಿಪಡಿಸಿರುವ ಶುಲ್ಕಗಳನ್ನು ಈ ಕೆಳಗಿನಂತೆ ಪರಿಷ್ಕರಿಸಿ ಆದೇಶಿಸಿದೆ.

| Sl. No. | Purpose | Revised Rate | Rule |
|---|---|---|---|
| 1 | 2 | 4 | 5 |
| 4 | Issue or renewal of certificate of registration and assignment of new registration mark, | | 47(1) 52(1) 54(1) 76(1) and 78(1) |
| | (f) Heavy goods vehicle | 1000 | |
| | (g) Heavy passenger motor vehicle | 1000 | |
| 9 | Endorsing hire purchase/ lease/hypothecation agreement | | 60 |
| | (b) Three Wheeler/Quadricycle/Light Motor Vehicle | 800 | |
| | (c) Medium or Heavy vehicle | 800 | |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 656 ವೆಚ್ಚ 12/2017 (ಭಾ), ದಿನಾಂಕ:29-06-2018 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
(ಎಂ. ಸತ್ಯವತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

**ಇವರಿಗೆ:**

ಸಂಕಲನಾಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಹಾಗೂ ಪ್ರಕಟಿತ 100 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಸಾರಿಗೆ ಇಲಾಖೆ ಇವರಿಗೆ ಒದಗಿಸಲು ಕೋರಿದೆ.

**ಪ್ರತಿಗಳು:**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ) (ಇ&ಆರ್ಎಸ್ಎ) (ಎ&ಇ) ಆಡಿಟ್ ಭವನ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಟಿ.ಟಿ.ಎಂ.ಸಿ ಕಟ್ಟಡ, ಶಾಂತಿನಗರ, ಬೆಂಗಳೂರು-27.
4. ಎಲ್ಲಾ ಅಪರ ಸಾರಿಗೆ ಆಯುಕ್ತರು/ ಜಂಟಿ ಸಾರಿಗೆ ಆಯುಕ್ತರು-ಸಾರಿಗೆ ಆಯುಕ್ತರ ಮುಖಾಂತರ
5. ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ/ಪ್ರಾದೇಶಿಕ ಸಾರಿಗೆ ಅಧಿಕಾರಿ/ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ-ಸಾರಿಗೆ ಆಯುಕ್ತರ ಮುಖಾಂತರ.

ಅನುಬಂಧ - 3

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಾಇಇ 50 ಸಾಇಪ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:06-03-2019.

**ಅಧಿಸೂಚನೆ**

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಅಧಿನಿಯಮ 2017 (2017ರ ಕರ್ನಾಟಕ ಅಧಿನಿಯಮ ಸಂಖ್ಯೆ 45) ರ ಅಧಿನಿಯಮದ ಪ್ರಕರಣ-13 ರಲ್ಲಿ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ನಿರ್ವಹಣೆಗಾಗಿ ನಿಧಿ ಸಂಗ್ರಹಿಸುವ ಸಲುವಾಗಿ ವಾಹನಗಳ ನೋಂದಣಿ ಸಮಯದಲ್ಲಿ ಉಪಕರ (CESS) ಅನ್ನು ವಿಧಿಸಲು ಮತ್ತು ಸಂಗ್ರಹಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಆದ್ದರಿಂದ, ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989, ನಿಯಮ 81 ರಡಿಯಲ್ಲಿ ವಾಹನಗಳ ನೋಂದಣಿಗೆ ಸಂಬಂಧಿಸಿದಂತೆ, ಕ್ರಮ ಸಂಖ್ಯೆ 4 ರಲ್ಲಿ ವಿವಿಧ ವರ್ಗಗಳ ವಾಹನಗಳ ವರ್ಗಗಳ ಆಧಾರದಲ್ಲಿ ನೋಂದಣಿ ಶುಲ್ಕಗಳ ದರಗಳೊಂದಿಗೆ ಈ ಕೆಳಕಂಡಂತೆ ಉಪಕರ (CESS) ಅನ್ನು ನಿಗಧಿಪಡಿಸಿ ಆದೇಶಿಸಿದೆ.

| ಕ್ರಸಂ. | ವಾಹನಗಳ ವರ್ಗ | ನಿಗಧಿಪಡಿಸಿದ ಉಪಕರ **(CESS)** ದರ (ರೂ. ಗಳಲ್ಲಿ) |
|---|---|---|
| 1 | ದ್ವಿಚಕ್ರ ವಾಹನ / ತ್ರಿಚಕ್ರ ವಾಹನ (ಸರಕು/ಪ್ರಯಾಣಿಕರ ವಾಹನ) | 500-00 |
| 2 | ಎಲ್ಲಾ ಇತರೆ ವರ್ಗದ ವಾಹನಗಳಿಗೆ (ಸಾರಿಗೆ/ಸಾರಿಗೇತರ ವಾಹನ) | 1000-00 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

6/3/19
(ಎಂ.ಸತ್ಯವತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಾರಿಗೆ ಇಲಾಖೆ

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ವಿಕಾಸಸೌಧ, ಬೆಂಗಳೂರು ಇವರಿಗೆ ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸಲು ಹಾಗೂ 50 ಪ್ರತಿಗಳನ್ನು ಪೀಠಾಧಿಕಾರಿ, ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಕಳುಹಿಸುವಂತೆ ಕೋರಿದೆ.

--2

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ)/(ಇ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398 ಹಾಗೂ ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5359, ಬೆಂಗಳೂರು–560001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಟಿ.ಟಿ.ಎಂ.ಸಿ. ಸಂಕೀರ್ಣ, ಶಾಂತಿನಗರ, ಬೆಂಗಳೂರು.
5. ಅಪರ ಆಯುಕ್ತರು, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ, ಎಂ.ಎಸ್.ಐ.ಎಲ್., ಕಟ್ಟಡ, ಬೆಂಗಳೂರು.
6. ಎಲ್ಲಾ ಅಪರ / ಜಂಟಿ / ಉಪ ಸಾರಿಗೆ ಆಯುಕ್ತರುಗಳು / ಪ್ರಾದೇಶಿಕ ಸಾರಿಗೆ ಅಧಿಕಾರಿ / ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ – (ಸಾರಿಗೆ ಆಯುಕ್ತರು, ಬೆಂಗಳೂರು ಇವರ ಮುಖಾಂತರ)

ಪ್ರತಿಗಳು:

1. ಮಾನ್ಯ ಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಾರಿಗೆ ಇಲಾಖೆ, ಬೆಂಗಳೂರು.
3. ಹೆಚ್ಚುವರಿ ಪ್ರತಿಗಳು / ಶಾಖಾ ರಕ್ಷಾ ಕಡತ / ಓ.ಡಿ.ಜಿ.ಸಿ